'SATYAVADI" Founded 1917 Regd. No. M. 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 29 ಸಂಚಿಕೆ 27 | ಬುಧವಾರ 31—10—45 | ಬಿಡಿ ಪ್ರತಿ 3 ಪೈ

ಶತ್ರುಗಳು ನಿಶಸ್ತ್ರರಾದರು

ಅಲ್ಫಾಸೀ ಅ 23 — ಸಾವಿರಾರು ಜಪಾನಿಗಳು 17 ನೇ ಭಾರತೀಯ ಸೈನ್ಯಕ್ಕೆ ತಮ್ಮ ಶಸ್ತ್ರಾಸ್ತ್ರಗಳನ್ನು ಒಪ್ಪಿಸಿಬಿಟ್ಟರು ಮಿಕ್ಕ ಜಪಾನೀ ಪಡೆಗಳೂ ಹೀಗೆಯೇ ಮಾಡುತ್ತಿವೆ. (ಐ.ಪಿ)

ಭಾ. ರಾ. ಸೈನ್ಯ ಸೇವೆ ವಿಚಾರಣೆ

ನವ ದೆಹಲಿ ಅ 26 — ಮುಂದಿನ ತಿಂಗಳು ರೆಡ್ ಫೋರ್ಟಿನಲ್ಲಿ ಭಾ. ರಾ. ಸೇನೆಯ ವಿಚಾರಣೆ ನಡೆಯುವುದರಿಂದ ನೂರಾರು ಪ್ರೇಕ್ಷಕರು ಆಗ ತಾವು ಹಾಜರಾಗಿರಲು ಅಪ್ಪಣೆ ಕೊಡಬೇಕೆಂದು ಕೇಳಿದ್ದಾರೆ ಸಾಧ್ಯವಾದಮಟ್ಟಿಗೂ ಅವರಿಗೆ ಅವಕಾಶ ಕಲ್ಪಿಸಲು ಒಬ್ಬೊಬ್ಬರಿಗೂ ಮೂರು ದಿನ ಸ್ಥಳಾನುಕೂಲವೇರ್ಪಡಿಸಿದೆ. ಪ್ರತಿ ಅಭ್ಯರ್ಥಿಗೂ ಮುಂಚಿತವಾಗಿ ತಿಳಿಸಲಾಗುತ್ತದೆ. ಲಾಹೋರ್ ಗೇಟ್ ಎಂಬೆಡೆಯಲ್ಲಿ 'ಪಾಸು' ಗಳನ್ನು ಕೊಡಲಾಗುತ್ತದೆ. (ಐ. ಪಿ)

ಭಾರತೀಯ ಸೈನಿಕರಿಗೆ ಪ್ರೌಢ ವಿದ್ಯಾಭ್ಯಾಸ

ನವ ದೆಹಲಿ ಅ 25— ಯುದ್ಧದ ದೆಸೆಯಿಂದ ಮಧ್ಯದಲ್ಲಿ ವಿದ್ಯಾಭ್ಯಾಸ ಬಿಟ್ಟಬಿಟ್ಟ ಭಾ. ಸೇನಿಕರು ಸೈನ್ಯದಲ್ಲಿರುವಾಗಲೇ ವಿಶ್ವವಿದ್ಯಾ ನಿಲಯಗಳ ಪರೀಕ್ಷೆಗೆ ಓದಬಹುದು ಸೇನಾಶಾಖೆಯ ಸ್ಪೆಷಲ್ ಸರ್ಟಿಫಿಕೇಟ್ ಆಫ್ ಎಜುಕೇಷನ್ ಪರೀಕ್ಷೆ ವೆಟ್ರಿಕ್ಯುಲೇಷನ್ ಪರೀಕ್ಷೆಗೆ ಸಮನಾದುದೆಂದು ಸಾಮಾನ್ಯವಾಗಿ ಎಲ್ಲಾ ವಿಶ್ವವಿದ್ಯಾನಿಲಯಗಳೂ ಒಪ್ಪಿಕೊಂಡಿವೆ ಈ ಯೋಗ್ಯತಾ ಪತ್ರ ವಿರುವವರು ಯಾವ ನೌಕರಿಗೆ ಬೇಕಾದರೂ ಸೇರಲು ಅನುಕೂಲ. ಈ ಪರೀಕ್ಷೆಯ ಮೊದಲನೇ ಭಾಗಕ್ಕೆ ಸಾಹಿತ್ಯ, ಗಣಿತ, ಭೂಗೋಳಶಾಸ್ತ್ರ, ಹಿಂದೂದೇಶದ ಚರಿತ್ರೆ : ಎರಡನೇ ಭಾಗಕ್ಕೆ ಸಾಮಾನ್ಯ ವಿಜ್ಞಾನ, ಯಾವುದಾದರೊಂದು ಆಧುನಿಕ ಭಾರತೀಯ ಭಾಷೆ, ಪೌರನೀತಿ— ಹೀಗೆ ಪಠ್ಯ ವಿಷಯಗಳನ್ನು ಗೊತ್ತುಪಡಿಸಿದೆ. (ಐ.ಪಿ.)

.....

ಚಿನ್ನಾ ಬೆಳ್ಳಿ ಧಾರಣೆ

ಸವರನ್ 1 ಕ್ಕೆ	ರೂ. 52-12-0
ಚಿನ್ನ ತೊಲ 1 ಕ್ಕೆ	78-4-0
ಬೆಳ್ಳಿ	1-6-0

ಸೂಚನೆ

ನಾಳೆ ನಮ್ಮ ಕಂಪೆನಿ ವಿಾಟಿಂಗು ಇರುವುದರಿಂದ ಪತ್ರಿಕೆ ಪ್ರಕಟಿಸಲ್ಪಡುವುದಿಲ್ಲ. ಮ್ಯಾ. ಸ.

ಜಾವಾಕ್ಕೆ ಸ್ವಾತಂತ್ರ್ಯವೇ

ಸೌರಬಾಯಾದಲ್ಲಿ ರಾಷ್ಟ್ರೀಯರಿಗೂ, ಭಾರತ ಮತ್ತು ಬ್ರಿಟಿಷ್ ಸೈನೀಕರಿಗೂ ನಡೆಯುತ್ತಿದ್ದ ಹೋರಾಟವನ್ನು ಡಾ || ಸೋಕರ್ನೋರವರ ಮಧ್ಯಸ್ಥಿಕೆಯಿಂದ ನಿಂತಿತು. ಡಾ || ಸೋಕರ್ನೋರವರು ಬಟಾವಿಯಾಕ್ಕೆ ಬಂದನಂತರ ಡಚ್ ಮತ್ತು ರಾಷ್ಟ್ರೀಯರಿಗೆ ಒಪ್ಪಂದದ ಮಾತುಕತೆ ನಡೆಯುವ ಏರ್ಪಾಡಾಗಿರುವುದಾಗಿ ಪ್ರಕಟವಾಗಿದೆ.

ಂ ಂ ಂ ಂ

ಅಟ್ಲಿಯವರ ಅಮೇರಿಕಾ ಪ್ರವಾಸ

ಬ್ರಿಟಿಷ್ ಮುಖ್ಯ ಮಂತ್ರಿ ಅಟ್ಲಿಯವರು ಅಮೇರಿಕಾಕ್ಕೆ 3 ವಾರಗಳೊಳಗೆ ಹೋಗಿ ಪ್ರೆ || ಟ್ರೂಮನ್ನರೊಡನೆ ಅಣುಬಾಂಬು ಸಂಬಂಧದ ನೀತಿ ಮೊದಲಾದ ವಿಷಯಗಳ ಬಗ್ಗೆ ಮಾತುಕತೆ ನಡೆಸುವರು.

ಂ ಂ ಂ ಂ

ವೈಸರಾಯರಿಗೆ ಗಾಂಧೀಜೀ ಬರೆಯುವರೆ

ನವ ದೆಹಲಿ ಅ 29— ಮಹಾತ್ಮಾ ಗಾಂಧಿಯವರು ವೈಸರಾಯರಿಗೆ ನ್ಯಾಷನಲ್ ಆರ್ಮಿ ಜನರ ವಿಷಯದಲ್ಲಿ ಕರುಣೆ ತೋರಬೇಕೆಂದು ಬರೆಯುವರೆಂದು ವಂದಿಯಾಗಿದೆ.

ಂ ಂ ಂ ಂ

ಚೈನಾ ಕಮ್ಯುನಿಸ್ಟರಿಗೆ ರಷ್ಯಾ ಸಹಾಯವೇ ?

ಚೈನಾದಲ್ಲಿ ಕೈಷೇಕ್ ಮತ್ತು ಕಮ್ಯೂನಿಸ್ಟ್ ಪಂಗಡಗಳಲ್ಲಿ ಕದನವು ಭೀಕರವಾಗುತ್ತಿರುವುದೆಂದೂ, ರಷ್ಯನ್ನರು ಕಮ್ಯುನಿಸ್ಟರಿಗೆ ಶರಣಾಗತರಾದ ಜಪಾನರ ಅಸ್ತ್ರಗಳನ್ನು ಒದಗಿಸುತ್ತಿರುವರೆಂದೂ ಪ್ರಕಟವಾಗಿದೆ.

ಂ ಂ ಂ ಂ

ರೀವಾ ರಾಜರ ಪ್ರಶಂಸೆ

ರೀವಾ ಮಹಾರಾಜರು ತಮ್ಮ ಪ್ರಜೆಗಳಿಗೆ ಜವಾಬ್ದಾರಿ ಸರಕಾರವನ್ನು ಕೊಟ್ಟಿದುದಕ್ಕಾಗಿ ಮಹಾರಾಜರನ್ನು ಶ್ರೀ ಪಂ || ಜವಹರಲಾಲರು ಅಭಿನಂದಿಸಿರುವರು.

ಂ ಂ ಂ ಂ

ಸರದಾರ್ ಪಟೇಲರ ೭೦ ನೇ ವರ್ಧಂತ್ಯುತ್ಸವ

ಸರದಾರ ವಲ್ಲಭ್ಭಾಯ್ ಪಟೇಲರಿಗೆ ಇಂದಿಗೆ 70 ವರ್ಷ. ಈ ವರ್ಧಂತ್ಯುತ್ಸವ ಸಮಾರಂಭವು ದೇಶದ ಅನೇಕಕಡೆ ಆಚರಿಸಲ್ಪಟ್ಟು ಅವರ ದೇಶಸೇವೆಯು ಪ್ರಕಂಸಿಸಲ್ಪಡುವುದು.

ವಿವಿಧ ವರ್ತಮಾನ

ಬಂಗಾಳದಲ್ಲಿ 1464 ಮಂದಿ ರಕ್ಷಣಾ ಖೈದಿಗಳು ಬಿಡುಗಡೆ ಮಾಡಲ್ಪಟ್ಟಿದ್ದಾರೆ.

ಅಂಕಾರಾದಲ್ಲಿ ತಾ || 29 ರಲ್ಲಿ ಟರ್ಕಿ ಪ್ರಜಾಸ್ವಾತಂತ್ರ್ಯ ವಾರ್ಷಿಕೋತ್ಸವವು ವೈಭವದಿಂದ ಆಚರಿಸಲ್ಪಟ್ಟಿತು.

ಸಂಟಿಯಾಗೊ ಹಾವಳಿಯಿಂದ ಪೂರ್ವ ತೀರದಲ್ಲಿನ ಅನೇಕ ಸ್ಥಳಗಳಲ್ಲಿ ಮನೆಮಠಗಳು ಹಾಳಾಗಿ ತುಂಬಾ ನಷ್ಟವಾಗಿದೆ.

ನಾರ್ವೆಗೆ 26 ಜರ್ಮನ್ ಹಡಗುಗಳು ದೊರೆಯುವವೆಂದು ಗೊತ್ತಾಗಿದೆ.

ಅಹಮದಾಬಾದಿನ ಮಹಾಜನರು ಶ್ರೀ ವಲ್ಲಭ್ಭಾಯರವರ ವರ್ಧಂತಿಯಂತೆ ಕಾಂಗ್ರೆಸ್ ಜಂಟಾವಣಾ ನಿಧಿಗೆ 10 ಮಿಲಿಯ ರೂಪಾಯಿಗಳನ್ನು ಒದಗಿಸುವುದಾಗಿ ತಿಳಿಸಿರುವರು.

ತಾ || 30 ರಲ್ಲಿ ಡಂಡಂನಿಂದ 20 ಮಂದಿ ರಕ್ಷಣಾ ಖೈದಿಗಳು ಬಿಡುಗಡೆ ಮಾಡಲ್ಪಟ್ಟರು.

ಆಧ್ಯಕ್ಷರ ಸಹೋದರನನ್ನು ಪೋಲೀಸ ಮುಖ್ಯಾಧಿಕಾರಿಯನ್ನಾಗಿ ಮಾಡಿದ್ದಕ್ಕಾಗಿ ಬ್ರೆಜಿಲ್ ರಾಜಧಾನಿಯಲ್ಲಿ ಶಾಂತಿಭಂಗವಾಗಿದೆ.

ಮೈಸೂರು ಪೌರ ಸಭೆಯು ನಿನ್ನೆ ಮುಂದುವರಿದ ಅಧಿವೇಶನದಲ್ಲಿ ಬಡ ಸಂಸಾರಿಗಳಿಗಾಗಿ 480 ಮನೆಗಳು ಮತ್ತು ವಿದ್ಯಾರ್ಥಿಗಳಿಗಾಗಿ 540 ಕೊಠಡಿಗಳನ್ನೂ ಕಟ್ಟಿಸುವ 11 ಲಕ್ಷ ರೂ ವೆಚ್ಚದ ಯೋಜನೆಯು ಮಂಜೂರಾಯಿತು. ಮತ್ತೊಂದು ವಿಷಯವೆಂದರೆ ಮಿಸೆಸ್ ಥಿಯೊಬಾಲ್ಡರು ಮತ್ತು ಶ್ರೀ ಎ ಕೃಷ್ಣಮೂರ್ತಿಯವರು ತಂದ 'ಹಾಲಿಗೆ ನೀರು ಬೆರೆಸಿ ಮಾರುವವರಿಗೆ ಉಗ್ರವಾಗಿ ದಂಡಿಸಿ ಭಾರಿ ಜುಲ್ಮಾನೆಯನ್ನು ಹಾಕಬೇಕು' ಎಂಬ ಸೂಚನೆ.

ಕೊನೆ ಘಳಿಗೆ ವಾರ್ತೆ

ಮೈಸೂರು, ಅ 31

ಕಾರದವಿಲಾಸ ಕಾಲೇಜಿಗೆ ಕೃಷ್ಣರಾಜ ವನದಲ್ಲಿ ನಿವೇಶನ ಒದಗಿಸುವ ವಿಷಯ ಪರ್ಯಾಲೋಚಿಸುವುದಾಗಿಯೂ, ರಣಜಿತ್ ಟಾಕೀಸಿನವರಿಗೆ ಜಲನ ಚಿತ್ರ ಮಂದಿರವನ್ನು ಕಟ್ಟಲು ಮೈಸೂರು ಬೇರಿಕಿನ ಪಕ್ಕದ ನಿವೇಶನವನ್ನು ಕೊಡಲು ಸರ್ಕಾರದ ಒಪ್ಪಿಗೆಯಿಲ್ಲದ ಪ್ರಯುಕ್ತ ಅಸಾಧ್ಯವೆಂದೂ, ಮು || ಜಿ ಆರ್. ರಾಮಯ್ಯನವರಿಗೆ ಮಂಡಿನೋವಿನಲ್ಲಿರುವ ಮಾಂಸದ ಹೆಳೆ ಮಾರ್ಪಟ್ಟನ್ನು ಬಿಚ್ಚಿ ಮಾಡುವುದು ಪೌರಸಭೆಗೆ ಸೇರಿದ್ದಿಂದೂ, ಕುರುಬರಹಳ್ಳಿಯ ಸ್ಮಶಾನ ಜಾಗದ ಸಂದರ್ಭದಲ್ಲಿ ಸರಕಾರವನ್ನು 1 ಲಕ್ಷದ 20 ಸಾವಿರ ರೂ. ಗಾಗಿ ಕೇಳಬೇಕೆಂದೂ, ಶ್ರೀ ರಾವ್ ಚಂದ್ರರಾವ್ ಜಾಧವ್ ಭೋರೆಯವರ ಅಧ್ಯಕ್ಷತೆಯಲ್ಲಿ ಈ ಸಂಜೆ ನಡೆದ ನಗರಾಭಿವೃದ್ಧಿ ಸಭೆಯಲ್ಲಿ ತೀರ್ಮಾನವಾಯಿತು.

ಸ ತ್ಯ ವಾ ದಿ

ದಿನ ಪತ್ರಿಕೆ

ಸ್ಥಳದಲ್ಲಿ — ತಿಂಗಳಿಗೆ 6 ಆಣೆ

ಸತ್ಯವಾದಿ ಸೋಮವಾರದ ಸಂಚಿಕೆಗೆ ಎಲ್ಲಾ ಊರುಗಳಲ್ಲೂ ಏಜಂಟರು ಬೇಕಾಗಿದ್ದಾರೆ. ವಿಷಯಗಳಿಗೆ ಬರೆಯಿರಿ. ಅಂಚೆ ವೆಚ್ಚ ಸೇರಿ ಪರಸ್ಥಳಕ್ಕೆ 1-12-0

ಮ್ಯಾನೇಜರ್, ಸತ್ಯವಾದಿ

ಚಾಮರಾಜಪುರಂ, ಮೈಸೂರು

1 ಕಸವಿದ್ದಲ್ಲಿ ಟಾಯಿಲೆ.

2 ಕಸವನ್ನೆಲ್ಲಾ ಮುನಿಸಿಪಲ್ ತಿಪ್ಪೆಯಲ್ಲೇ ಹಾಕಿರಿ. ನಿಮ್ಮ ಮಕ್ಕಳನ್ನು ರಸ್ತೆಗಳಲ್ಲಿ ಹೇಸಿಗೆ ಮಾಡಲು ಬಿಡಬೇಡಿರಿ.

ಮೈ. ಪೌರಸಭಾ ಪ್ರಚಾರ ಸಮಿತಿ

For Good Printing

L. N. Press

Sriramp et MYSORE

Local Agent—D. Mahaadev

Opera Talkies, Mysore

ರ ಕ್ತ ವೃ ದ್ಧಿ ಗೆ — ಧಾ ತು ಪು ಷ್ಟಿ ಗೆ

ಶ ಕ್ತಿ ಸು ಧಾ

ಸೇವನೆಯೇ ಸುಲಭೋಪಾಯ

ಬೆಲೆ ಡಬ್ಬಿ ಒಂದಕ್ಕೆ ಒಂದುರೂಪಾಯಿ.

ಶಕ್ತಿಸುಧಾ, ೧೦೬೭ ಚಾಮರಾಜಪುರಂ ಮೈಸೂರು.



TALK-A-TONE

(Pioneer Film-mag of S. India)

ಆ ಮ ಶಂ ಕೆ

ಅ ತಿ ಸಾ ರ ಗ ಳಿ ಗೆ

.... ಮಾತ್ರ ....

ಗು ಣ ಕಾ ರಿಯಾ ದ

ಡಿ ಸೆಂ ಟಿ ಸೆಡ್

ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತೆ.

— ಸಾಬಕಿಸ್ಟರು —

ರಘುಲಾಲ್ ಅಂಡ್ ಕೊ.

ಟಿ. ಸಿ. ನಟರಾಜ್ ಅಂಡ್ ಕೊ.

— ಹಂಜುವವರು —

ಕಾಂತರಾಜ್ ಅಂಡ್ ಕೊ.

ರವೇ ಬೀದಿ, ಮೈಸೂರು.

AT Opera—

4 th Week

ರಂಜಿತ್, ಟಿ. ಆರ್, ರಾಜಕುಮಾರಿ

ಕೆ. ಎಲ್. ವಿ. ವಸಂತ,

ಕೃಷ್ಣ, ಮಧುರಂ ಪಾತ್ರವಹಿಸಿರುವ

ಶಾಲಿವಾಹನ

Morning Shows

From 2-11-45

Thunder Birds

At Ranjit

Humayun

8 ನೇ ವಾರ

ರಣಜಿತ್ ಟಾಕೀಸಿನಲ್ಲಿ

.... ಹುಮಾಯೂರ್....

ಅಶೋಕ ಕುಮಾರ್, ಚಂದ್ರಮೋಹನ್

ವೀಣಾ, ನರ್ಗಿಸ್,, ಷಾ ನವಾಸ್

ಪಾತ್ರವಹಿಸಿರುವರು

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ಸುಖ ಆರೋಗ್ಯ ಆನಂದದಾಯಕ

ಜೀ ವಿ ತ ಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಜಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಪುಟ್ಟು ಒಂದು ಪಲಂ ವ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. ೨-8-0 ಮಾತ್ರ.

ನಮ್ಮ ಸುಳಿಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುಡುತಿಸ ಕೇಸರಿ ಅತ್ಯಂತ ಪರಿಶುದ್ಧವಾದ ಪಾತರುಯಾದುದು. ವಿವರಗಳಿಗೆ ಮತ್ತು ಏಜೆಂಟರಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ ರಸ್ತೆ, ಜಿ. ಟಿ. ಮದರಾಸು.